ಕಾಲದಲ್ಲಿ ದೌರ್ಜನ್ಯಕ್ಕೊಳಗಾದ ಹರಿಜನ ಗಿರಿಜನರಿಗೆ ಸ್ಪೆಷಲ್ ಲೀಗಲ್ ಏಡ್ ಸೆಲ್ ಎಂದು ಮಾಡಿದ್ದರು ಅದನ್ನು ಹಿಂದಿನ ಸರ್ಕಾರದವರು ಫ್ರೀ ಲೀಗಲ್ ಏಡ್ ಬೋರ್ಡಿನವರಿಗೆ ವಹಿಸಿಕೊಟ್ಟಿದ್ದಾರೆ. ಇದನ್ನು ತಾವು ಪುನರ್ ಪರಿಶೀಲನೆ ಮಾಡಿ ದೌರ್ಜನ್ಯಕ್ಕೊಳಗಾದ ಹರಿಜನಗಿರಿಜನರಿಗೆ ಫ್ರೀ ಲೀಗಲ್ ಏಡ್ ಸಿಕ್ಕುವಂತೆ ವ್ಯವಸ್ಥೆ ಮಾಡುತ್ತಾರಾ ಎಂದು ಕೇಳಬಯಸುತ್ತೇನೆ ?

ಶ್ರೀ ಬಿ. ಶಿವಣ್ಣ :—ಫ್ರೀ ಲೀಗಲ್ ಏಡ್ ಈಗಲೂ ಕೂಡ ಇದೆ. ದೌರ್ಜನ್ಯಕ್ಕೊಳಗಾದ ಹರಿಜನಗಿರಿಜನರು ಇದರ ಸೌಲಭ್ಯವನ್ನು ಪಡೆದುಕೊಳ್ಳಬಹುದು. ಇನ್ನು ಎರಡನೆಯದಾಗಿ ಹಾಸ್ಟೆಲ್‌ಗಳಲ್ಲಿರುವ ಹುಡುಗರಿಗೆ ಎಕ್ಸ್‌ಟ್ರಾ ಛಾರ್ಜಸ್ ಕೊಡುವುದಲ್ಲದೆ ಎಲ್ಲ ತರಹದ ಅನುಕೂಲಗಳನ್ನೂ ಈಸಲ ಮಾಡಿಕೊಡುತ್ತೇವೆ. ಇನ್ನು ಮಕ್ಕಳಿಗೆ ಟ್ಯೂಷನ್ ಮಾಡಲು ವ್ಯವಸ್ಥೆ ಮಾಡಬೇಕೆಂದು ಹೇಳಿದ್ದಾರೆ. ಈ ಪದ್ಧತಿ ಈಗ ಜಾರಿಯಲ್ಲಿದೆ. ಆದರೆ ಕೆಲವು ಕಡೆ ಅವ್ಯವಹಾರಗಳಾಗುತ್ತಿವೆ ಎಂಬುದು ನಮ್ಮ ಗಮನಕ್ಕೆ ಬಂದಿದೆ. ಸರಿಯಾಗಿ ನಡೆಯುತ್ತಿಲ್ಲ. ಈಗ ಈ ಮಕ್ಕಳಿಗೆ ಪರೀಕ್ಷೆಯ ಸಮಯದಲ್ಲಿ ಸ್ವಲ್ಪ ಸಹಾಯ ಮಾಡಬಹುದೆಂದು ಮಾನ್ಯ ಸದಸ್ಯರು ಹೇಳಿದಂತೆ ಇದನ್ನು ನಾನು ಪರಿಶೀಲಿಸುತ್ತೇನೆ. ಇನ್ನು ವಿಮೆನ್ಸ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಬಗ್ಗೆ ಹೇಳಿದರು. ಅದು ಇಷ್ಟರಲೇ ರೀ-ಕಾನ್ಸಿಟಿಟ್ಯೂಟ್ ಆಗುತ್ತದೆ. ಅದಕ್ಕೆ ದುಡ್ಡು ಕೂಡ.....

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಉಪಾಧ್ಯಕ್ಷಣಿಯವರೆ, ಗ್ರಾನೈಟ್ ಲೈಸೆನ್ಸ್ ನೀಡಿರುವುದರಲ್ಲಿ ಬಹಳ ದೊಡ್ಡ ಅನ್ಯಾಯ ನಡೆದಿದೆ, ಅವ್ಯವಹಾರ ನಡೆದಿದೆ ಈ ವಿಚಾರದಲ್ಲಿ ಮಾನ್ಯ ಮಂತ್ರಿಗಳು ನನಗೆ ಸ್ಪಷ್ಟವಾದ ಭರವಸೆಯನ್ನು ನೀಡಿಲ್ಲ. ಆದ್ದರಿಂದ ನಾನು ಇಲ್ಲಿ ಧರಣಿ ಕೂತು ಕೊಳ್ಳುತ್ತೇನೆ.

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್‌ರವರು ಮಾನ್ಯ ಅಧ್ಯಕ್ಷರ ಪೀಠದ ಮುಂದಿರುವ ಆವರಣದಲ್ಲಿ ಬಂದು ಧರಣಿ ಕುಳಿತರು)

ಶ್ರೀಮತಿ ಮೋಟಮ್ಮ.—ಮಾನ್ಯ ಉಪಾಧ್ಯಕ್ಷಣಿಯವರೆ, ಮಾನ್ಯ ಮಂತ್ರಿಗಳು ನನಗೆ ಸ್ಪಷ್ಟವಾಗಿ ಉತ್ತರವನ್ನು ಹೇಳಲಿಲ್ಲ. ನಾನು ಹೇಳಿದ್ದು ಹಾಸ್ಟೆಲ್‌ಗಳಲ್ಲಿರತಕ್ಕ ವಿದ್ಯಾರ್ಥಿಗಳಿಗೆ ಟ್ಯೂಷನ್ ಹೇಳಿಕೊಡಲು ಸ್ಕೂಲ್‌ನಲ್ಲಿ ಕೆಲಸ ಮಾಡತಕ್ಕ ಟೀಚರ್‌ನ್ನೇ ನೇಮಕ ಮಾಡಿದ್ದಾರೆ ಅವರಿಗೆ ತಿಂಗಳಿಗೆ ೧೮೦ ರೂಪಾಯಿಯಂತೆ ಸಂಭಾವನೆಯನ್ನು ಕೊಡುತ್ತಿದ್ದೀರಿ. ಅವರು ಸಾಯಂಕಾಲದ ಹೊತ್ತು ಸರಿಯಾಗಿ ಬಂದು ಪಾಠವನ್ನು ಮಾಡುವುದಿಲ್ಲ. ಇದರಿಂದಾಗಿ ಹರಿಜನಗಿರಿಜನ ಮಕ್ಕಳ ಹಾಸ್ಟೆಲ್‌ಗಳಲ್ಲಿನ ವಿದ್ಯಾರ್ಥಿಗಳ ರಿಸಲ್ಟ್ ಚೆನ್ನಾಗಿ ಬರುತ್ತಿಲ್ಲ. ಒಳ್ಳೆಯ ರಿಸಲ್ಟ್ ಬರುವಂತೆ ಮಾಡಬೇಕು ಈ ಮಕ್ಕಳಿಗಾಗಿಯೇ ಪ್ರತ್ಯೇಕವಾಗಿ ಒಬ್ಬ ಟ್ಯೂಟರ್‌ನ್ನು ಇಟ್ಟರೆ ಅವನ್ನು ಅಲ್ಲೇ ಇದ್ದು ಆ ಮಕ್ಕಳಿಗೆ ಪಾಠವನ್ನು ಹೇಳಿಕೊಡಲು ಅನುಕೂಲವಾಗುತ್ತದೆ. ಜೊತೆಗೆ ಒಳ್ಳೆಯ ಫಲಿತಾಂಶ ಕೂಡ ಬರುತ್ತದೆ ಈ ರೀತಿ ಮಾಡುತ್ತೀರಾ ?

ಶ್ರೀ ಬಿ. ಶಿವಣ್ಣ.—ಮಾನ್ಯ ಉಪಾಧ್ಯಕ್ಷಣಿಯವರೆ, ಐ.ಎ.ಎಸ್.ಗೆ ಹೋಗುವಂಥ ವಿದ್ಯಾರ್ಥಿಗಳಿಗೆ ಬೆಂಗಳೂರಿನಲ್ಲಿ ಇತ್ತೀಚೆಗೆ ಟ್ಯೂಷನ್ ವ್ಯವಸ್ಥೆ ಮಾಡಿದ್ದೇವೆ, ಮತ್ತೆ ಮಾನ್ಯ ಸದಸ್ಯಣಿಯವರು ಪ್ರಸ್ತಾಪ ಮಾಡಿದಂಥ ಇತರ ವಿಚಾರಗಳ ಬಗ್ಗೆ ಅವರ ಜೊತೆ ನಾನು ಚರ್ಚೆ ಮಾಡುತ್ತೇನೆ.

ಶ್ರೀ ಪಿ. ಸಿ. ಸಿದ್ದನಗೌಡರ್.—ಮಾನ್ಯ ಉಪಾಧ್ಯಕ್ಷಣಿಯವರೆ.....

ಉಪಾಧ್ಯಕ್ಷರು.—ಮೊದಲು ಆ ಕಡೆಯವರದ್ದು ಆಗಲಿ, ಅನಂತರ ನಿಮಗೆ ಅವಕಾಶವನ್ನು ಕೊಡುತ್ತೇನೆ.

ಶ್ರೀ ಪಿ. ಎಸ್. ರಾಣೆ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಗಂಗಾ ಕಲ್ಯಾಣ ಕಾರ್ಯಕ್ರಮದ ಬಗ್ಗೆ ೫ ವರ್ಷದ ವರೆಗೂ ಸರ್ಕಾರವೇ ಮೇಂಟೆನೆನ್ಸ್ ಮಾಡಬೇಕಾಗುತ್ತದೆಂದು ಸರ್‌ಕ್ಯುಲರ್ ಹೊರಡಿಸಿದ್ದೇವೆಂದು ಹೇಳಿದರು. ಐದು ವರ್ಷಗಳಾದ ನಂತರ ಅದನ್ನು ಯಾರು ಮಾಡುತ್ತಾರೆಂಬುದನ್ನು ಸ್ಪಷ್ಟಪಡಿಸಬೇಕು. ಐದು ವರ್ಷಗಳ ನಂತರವೂ ಬೇರೆ ನೀರಾವರಿ ಯೋಜನೆಗಳನ್ನು ಸರ್ಕಾರದವರೇ ನಿರ್ವಹಣೆ ಮಾಡಿದಂತೆ ಇದನ್ನೂ ಸಹ ಮಾಡಬೇಕು ಆ ರೀತಿ ಮಾಡುವಂಥ ಒಂದು ವ್ಯವಸ್ಥೆಯನ್ನು ಮಾಡುತ್ತೀರಾ ಎಂದು ಕೇಳುತ್ತೇನೆ.

ಎರಡನೆಯದಾಗಿ ಐ.ಸಿ.ಡಿ.ಎಸ್. ಪ್ರೋಗ್ರಾಮ್‌ಗಳ ಬಗ್ಗೆ ಕೆಲಸಗಳು ತೃಪ್ತಿಕರವಾಗಿ ಕೆಲಸ ಆಗಿಲ್ಲವೆಂದು ಎಲ್ಲ ಮಾನ್ಯ ಸದಸ್ಯರು ದೂರು ಕೊಟ್ಟಿದ್ದಾರೆ ಸಾಧ್ಯವಾದಷ್ಟು ಕಡೆ ವಾಲೆಂಟರಿ ಆರ್ಗನೈಸ್‌ಗೆ ಐ.ಸಿ.ಡಿ.ಎಸ್. ಪ್ರೋಗ್ರಾಮ್ ನಿರ್ವಹಣೆ ಮಾಡಲಿಕ್ಕೆ ಕೊಡಬೇಕೆಂದು ಕೇಂದ್ರ ಸರ್ಕಾರ ಒಂದು ನಿರ್ಣಯ ತೆಗೆದುಕೊಂಡಿದೆ. ಇಂಥ ಯಾವುದೇ ಸಂಸ್ಥೆಗಳು ಮುಂದೆ ಬಂದರೆ ಅವರಿಗೆ